ಮಾಹಿತಿಯನ್ನು ಪದೇ ಪದೇ ಹಾಕಲಾರಂಭಿಸಿದ. ಆಗ ಆತನನ್ನು ಗುಂಪಿನಿಂದ ಹೊರಗಿಟ್ಟರೆ ವೈಮನಸ್ಯ ಬೆಳೆಯುತ್ತದೆ. ಸುಮ್ಮನಿದ್ದರೆ ಗುಂಪಿನ ಉದ್ದೇಶವೇ ವಿಫಲವಾಗುತ್ತದೆ. ಕೊನೆಗೆ ಇಡೀ ಗುಂಪನ್ನು ಅಡ್ಮಿನ್ ಓನ್ಲಿ ಅಂತ ಬದಲಾಯಿಸಲಾಯಿತು. ಸಂಯಮ, ನಿಯಮಗಳನ್ನು ಮೀರುವುದರಿಂದ ಲಭ್ಯವಿರುವ ಅವಕಾಶಗಳು ಕಡಿಮೆಯಾಗಿಬಿಡುತ್ತದೆ. ಇದರ ಪರಿಣಾಮ ಇತರರ ಮೇಲೂ ಬೀರುತ್ತದೆ.

## ಬಾವಿಯೇ ಜಗತ್ತಾಗಿಬಿಟ್ಟರೆ...

ಜನರೇಶನ್ ಝಡ್, ಎಂದರೆ 21 ವರ್ಷದೊಳಗಿನ ಸಮುದಾಯ ತಮ್ಮ ಪ್ರೊಫೈಲ್‌ಗಳನ್ನು ಸೈದ್ಧಾಂತಿಕವಾಗಿ ರೂಪಿಸಿಕೊಳ್ಳುವ ಹಂಗಿಗೇ ಬೀಳುತ್ತಿಲ್ಲ. ಅವರ ಆಸಕ್ತಿಗಳು ಕ್ಷೇತ್ರಾಧಾರಿತವಷ್ಟೇ ಆಗಿರುವುದು ಕಾಣಿಸುತ್ತದೆ. ಸಿನಿಮಾ, ನೃತ್ಯ, ಸಾಮಾಜಿಕ ಸೇವೆ, ಅನಿಮೇಷನ್ ಅಥವಾ ಕ್ರೀಡೆ, ಡಿಜಿಟಲ್ ಉದ್ಯಮ... ಹೀಗೆ ಅನೇಕ ವಿಚಾರಗಳನ್ನೇ ಪ್ರೊಫೈಲ್‌ನಲ್ಲಿ ತಮ್ಮ ಐಡೆಂಟಿಟಿಯನ್ನಾಗಿ ಮಾಡಿಕೊಂಡಿರುತ್ತಾರೆ. ಅವರೆಲ್ಲ ಫೇಸ್‌ಬುಕ್‌ನ ವಿಶಾಲ ವ್ಯಾಪ್ತಿಯ ಹಂಗಿಗೇ ಬೀಳದವರು. ಇನ್‌ಸ್ಟಾಗ್ರಾಂನ ನಂತರದ ಡಿಜಿಟಲ್ ಜಮಾನಾದಲ್ಲಿ ತಮ್ಮದೇ ಆಸಕ್ತಿಯ ಗುಂಗಿನೊಳಗೆ ಇದ್ದುಬಿಡುತ್ತಾರೆ.

ಆದರೆ ಈ ತಲೆಮಾರಿಗಿಂತ ಹಿಂದಿನವರು, ಅಂದರೆ ಜನರೇಷನ್ ಎಕ್ಸ್ ವಿಭಾಗದವರು ಫೇಸ್‌ಬುಕ್ ಮತ್ತು ಟ್ವಿಟ್ಟರ್‌ನಲ್ಲಿ ಜಟಾಪಟಿಯನ್ನು ಹೆಚ್ಚಾಗಿ ಗಮನಿಸುತ್ತಾರೆ. ತಾವೂ ಜಗಳಕ್ಕೆ ಬೀಳುತ್ತಾರೆ. ಡಿಜಿಟಲ್ ಪ್ರವಾಹದಲ್ಲಿ 'ಗೋಡೆ–ಐಡೆಂಟಿಟಿ' ಎನ್ನುವುದು ಸದ್ಯದ ಒಂದು ಹಂತವಷ್ಟೇ ಎನ್ನುವುದನ್ನು ಮರೆಯುವಂತಿಲ್ಲ.

## ಒಬ್ಬರಿಗೆ ವೇತನ, ಮತ್ತೊಬ್ಬರಿಗೆ ನಷ್ಟ

ಕ್ರಿಕೆಟ್ ಇಷ್ಟಪಡುವ ದೊಡ್ಡ ಸಮೂಹವೇ ಭಾರತದಲ್ಲಿದೆ. ತಮ್ಮ ಕೆಲಸವನ್ನು ಬದಿಗಿಟ್ಟು ಪಂದ್ಯಾವಳಿಗಳನ್ನು ವೀಕ್ಷಿಸುವ ಮನೋಭಾವದ ಕುರಿತು ಒಂದು ವಿಶ್ಲೇಷಣೆ ಹೀಗಿದೆ: 'ಕ್ರಿಕೆಟ್ ಆಟಗಾರರು ಅವರ ವೃತ್ತಿಯನ್ನು ನಿರ್ವಹಿಸುತ್ತ ಆದಾಯ ಗಳಿಸುತ್ತಿರುತ್ತಾರೆ. ವೀಕ್ಷಕರು ತಮ್ಮ ವೃತ್ತಿಯನ್ನು ಬದಿಗಿಟ್ಟು ಆದಾಯ ನಷ್ಟ ಮಾಡಿಕೊಳ್ಳುತ್ತಾರೆ.' ಇದು ಸಾಮಾಜಿಕ ಜಾಲತಾಣಗಳಿಗೂ ಅನ್ವಯಿಸುತ್ತದೆ.

ಸಾಮಾಜಿಕ ಜಾಲತಾಣದಲ್ಲಿ ಯಾವ ವಿಷಯ ಕುರಿತು ಚರ್ಚೆಗಳು ಜೀವಂತ ಇರಬೇಕು, ಯಾವ ಸಿದ್ಧಾಂತದ ವಿರುದ್ಧವೇ ಮಾತುಗಳು ಕೇಳಿ ಬರಬೇಕು, ಯಾವ ರಾಜಕೀಯ ಪಕ್ಷದ ವರ್ತನೆ ಹೇಗಿರಬೇಕು ಎಂಬೆಲ್ಲ ವಿಚಾರಗಳನ್ನು ನಿರ್ವಹಿಸಲು ಒಂದಷ್ಟು ಕಾರ್ಯಕರ್ತರು ಕೆಲಸ ಮಾಡುತ್ತಿರುತ್ತಾರೆ. ಅಥವಾ ಆಯಾ ಕ್ಷೇತ್ರದಲ್ಲಿ ವಿಷಯಗಳ ಕುರಿತ ಚರ್ಚೆ ಚಾಲ್ತಿಯಲ್ಲಿ ಇರುವಂತೆ ನೋಡಿಕೊಳ್ಳಲು ಸಿಬ್ಬಂದಿಯನ್ನೇ ನೇಮಕ ಮಾಡಲಾಗುತ್ತದೆ. ಹಾಗಿದ್ದರೆ ಅಂತಹ ಮಾಧ್ಯಮಗಳಲ್ಲಿ ಕಾಣುವ ಹೇಳಿಕೆಗಳಿಗೆ, ನಮ್ಮ ಸಮಯ, ನೆಮ್ಮದಿ, ತಾಳ್ಮೆಯನ್ನೆಲ್ಲ ವಿನಿಯೋಗಿಸಿ ಪ್ರತಿಕ್ರಿಯಿಸಿ ಸಿಟ್ಟನ್ನು ಹೆಚ್ಚಿಸಿಕೊಳ್ಳುವುದರಿಂದ ಆಗುವ ಲಾಭವಾದರೂ ಏನು?

## ಗೋಡೆಯ ನೆರಳಲ್ಲಿ ಪಟ್ಟಾಂಗ

ನಿಂದನೆಯ ಮಸಿ ಬಳಿದುಕೊಂಡ ಗೋಡೆಯ ಮಾದರಿಯಲ್ಲಿಯೇ ಚಿತ್ತಾರದ ಸುಂದರ ಗೋಡೆಗಳೂ ಹಲವಾರು ಇವೆ. ಫೇಸ್‌ಬುಕ್‌ಗಿಂತ ಹಿಂದೆ ಬಂದಿದ್ದ ಆರ್ಕುಟ್ ಎಂಬ ಸಾಮಾಜಿಕ ಜಾಲತಾಣ ಇಷ್ಟೊಂದು ಸದ್ದು ಮಾಡಿರಲಿಲ್ಲ. ಫೇಸ್‌ಬುಕ್‌ನ ನಂತರ ಡಿಜಿಟಲ್ ಲೋಕಕ್ಕೆ ಕಾಲಿಟ್ಟ ಇನ್‌ಸ್ಟಾಗ್ರಾಂ ಕೂಡ ಜಗಳದ ವಿಚಾರಕ್ಕೆ ಕುಖ್ಯಾತಿ ಪಡೆದಿಲ್ಲ. ಫೇಸ್‌ಬುಕ್‌ನಲ್ಲಿರುವ ಸಾಧ್ಯತೆಗಳೇ ಅದರ ಕುರಿತು ಮತ್ತಷ್ಟು ಮಾತನಾಡುವಂತೆ ಮಾಡುತ್ತವೆ. ಅಂತಹ ಸಾಧ್ಯತೆಗಳನ್ನು ಸಕಾರಾತ್ಮಕವಾಗಿ ಬಳಸಿಕೊಂಡ ಅನೇಕರು ಇದ್ದಾರೆ. ಸಾಹಿತ್ಯ ಓದುವವರು, ಸಿನಿಮಾ ಪ್ರಿಯರು, ಸಿನಿಮಾ ನಟರ ಅಭಿಮಾನಿಗಳು, ಯಕ್ಷಗಾನ ಅಭಿಮಾನಿಗಳು ಅಥವಾ ಯಕ್ಷಗಾನ ಕಲಾವಿದರ ಅಭಿಮಾನಿಗಳು ಪ್ರತ್ಯೇಕ ಪುಟಗಳನ್ನು ತೆರೆದು ಚರ್ಚೆಗಳನ್ನು ನಡೆಸುತ್ತಾರೆ.

'ಮಗಳು ಜಾನಕಿ' ಕನ್ನಡ ಧಾರಾವಾಹಿಯ ನೋಡುಗರದ್ದೇ ಒಂದು ಬಳಗವಿದೆ. ಆ ಗುಂಪಿನ ಸದಸ್ಯರು ಪ್ರತೀ ಸಂಚಿಕೆ ಪ್ರಸಾರವಾದ ಕೂಡಲೇ ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಾರೆ. ಈ ಗುಂಪಿನಲ್ಲಿ ಬರೋಬ್ಬರಿ 50 ಸಾವಿರ ಸದಸ್ಯರಿದ್ದಾರೆ. ಕೇವಲ ಅನಿಸಿಕೆಗಳಿಗೆ ಸೀಮಿತವಾಗದ ಆ ಪುಟದಲ್ಲಿ, ಕಥೆಯ ಕುರಿತು ತಮಾಷೆಯ ಮಾತುಗಳು, ಕಾಲ್ಪನಿಕವಾಗಿ ಕತೆಯನ್ನು ಮುಂದುವರೆಸುವುದು, ಪ್ರಸಾರವಾದ ದೃಶ್ಯವನ್ನೇ ಮತ್ತೊಂದು ದೃಷ್ಟಿಕೋನದಲ್ಲಿ ಮರುರೂಪಿಸುವುದು... ಹೀಗೆ ಸದಸ್ಯರು ಸೃಜನಶೀಲವಾಗಿ ತೊಡಗಿಸಿಕೊಳ್ಳುತ್ತಾರೆ. ಕಥೆ ಮುಂದಕ್ಕೆ ಹೇಗೆ ಸಾಗಿದರೆ ಚೆನ್ನ ಎಂಬುದಾಗಿ ನಿರ್ದೇಶಕ ಟಿ.ಎನ್. ಸೀತಾರಾಮ್ ಕೂಡ ಆಗಾಗ ಮಾಹಿತಿ ಪಡೆಯುತ್ತಾರೆ.

ಹಿರಿಯ ನಟಿ, ಲೇಖಕಿ ಜಯಲಕ್ಷ್ಮೀ ಪಾಟೀಲ್ ಆರಂಭಿಸಿದ ಪುಟ 'ಅಂತಃಪುರ'. ಇದು ಮಹಿಳೆಯರಿಗೆ ಮಾತ್ರ ಮೀಸಲಿರುವ ಪುಟ. ಪರಸ್ಪರರ ಬಗ್ಗೆ ಅರಿವಿದ್ದವರು ಮಾತ್ರ ಈ ಗುಂಪಿನ ಸದಸ್ಯರಾಗಬಹುದು. ಇಲ್ಲಿ ಚರ್ಚೆಯಾಗುವ ವಿಷಯಗಳನ್ನು ಫಾರ್ವರ್ಡ್ ಮಾಡುವಂತಿಲ್ಲ ಎಂಬ ಷರತ್ತನ್ನು ಗುಂಪಿಗೆ ಸೇರಿದ ಪ್ರತೀ ಸದಸ್ಯೆಗೂ ತಿಳಿಸಲಾಗುತ್ತದೆ. ಮಹಿಳೆಯರು ಮುಕ್ತವಾಗಿ ಪ್ರಶ್ನೆಗಳನ್ನು ಕೇಳಬಹುದು, ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದು. ಎಲ್ಲಿಯೂ ನಿಂದನೆಯ, ಬೈಗುಳದ ಕೆಸರು ಎರಚಿಕೊಳ್ಳದೆ, ಅಭಿಪ್ರಾಯಭೇದಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ ಮುನ್ನಡೆಯುವ ಮಹಿಳೆಯರೇ ಇದರ ಸದಸ್ಯರಾಗಿದ್ದಾರೆ. ರಾಜಕೀಯ, ಸಾಮಾಜಿಕ, ವೈಯಕ್ತಿಕ... ಹೀಗೆ ಯಾವುದೇ ವಿಚಾರಗಳ ಚರ್ಚೆಗೆ ಇಲ್ಲಿ ಅವಕಾಶವಿದೆ. ಸಂಜೆಹೊತ್ತು ಬಾವಿಕಟ್ಟೆಯಲ್ಲಿ ಆರಾಮವಾಗಿ ಮಾತನಾಡಿದಂತೆ, ಪ್ರಶ್ನೆಗಳನ್ನು ಕೇಳಿಕೊಂಡಂತೆ, ಅನಿಸಿಕೆಗಳನ್ನು ಹಂಚಿಕೊಂಡಂತೆ ಇಲ್ಲಿ ಸುಮಾರು 400 ಮಹಿಳೆಯರು ಮುಕ್ತವಾಗಿ ಭಾಗವಹಿಸುತ್ತಾರೆ. ಇಂಥ 'ಅಂತಃಪುರ'ಗಳ ಸಂಖ್ಯೆ ಹೆಚ್ಚಾಗಬೇಕು.

